ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 30–09–2020

# ಪತ್ರಿಕಾ ಪ್ರಕಟಣೆ

## e-Permit of Auto rickshaw

**Bengaluru, September 30 (Karnataka Information)**

**The Auto rickshaw Owner/Drivers who are holding the old permit to ply within the limits of Bruhat Bengaluru Mahanagara Palike (BBMP) are hereby informed to visit RTO Auto rickshaw and STUs and replace the old permits with new e-permit which is having more security features along with QR Code.**

**e-Permit of Auto rickshaw is based on DL numbers of the Driver/ Owner and it requires the permit holder to be present for Photo and along with the relevant documents. The last date for getting a new e-Permit is 30-11-2020. Therefore, the permit holders of Auto rickshaw cab are informed to take the opportunity for replacing their old permits within the office working hours.**

## ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ–ಆನ್‌ಲೈನ್ ಮೂಲಕ ಆಕ್ಷೇಪಣೆ

**ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ):**

ಸೆಪ್ಟೆಂಬರ್–2020ರ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ಸಂಬಂಧಪಟ್ಟಂತೆ ವಿಜ್ಞಾನ ವಿಷಯದ ಮಾದರಿ ಉತ್ತರ ಹಾಗೂ **Scheme of Evaluation** ಕುರಿತು ಮಂಡಳಿಯ ಅಂತರ್ಜಾಲ (**www.kseeb.kar.nic.in**) ದಲ್ಲಿ ಪ್ರಕಟಿಸಿದೆ

ಆಕ್ಷೇಪಣೆ ಸಲ್ಲಿಸುವ ವಿದ್ಯಾರ್ಥಿಗಳು, ಮಂಡಳಿಯ ಅಂತರ್ಜಾಲದಲ್ಲಿ ಲಾಗಿನ್ ಆಗಿ, ವಿದ್ಯಾರ್ಥಿಯು ನೋಂದಣಿ ಸಂಖ್ಯೆಯನ್ನು ನೋಂದಣಿ ಮಾಡಿದ ನಂತರ **OTP (One Time Password)**ಯು ವಿದ್ಯಾರ್ಥಿಯ ಮೊಬೈಲ್‌ನಲ್ಲಿ ಸ್ವೀಕೃತಿಯಾಗುತ್ತದೆ. ನಂತರ ವಿದ್ಯಾರ್ಥಿಯು ಆನ್‌ಲೈನ್‌ನಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಸಲ್ಲಿಸಿದ ಆಕ್ಷೇಪಣೆಯು 100 ಪದಗಳೊಳಗೆ ಇರುವುದು ಕಡ್ಡಾಯ. ಆಕ್ಷೇಪಣೆಯನ್ನು ಸಲ್ಲಿಸಲು ಕೊನೆಯ ದಿನಾಂಕ 02ನೇ ಅಕ್ಟೋಬರ್ 2020 ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ "ಸೇವಾ ಸಿಂಧು" ವೆಬ್ ಪೋರ್ಟ್‌ನಲ್ಲಿ ಹೆಚ್ಚುವರಿ ಬ್ಯಾಂಕ್ ಖಾತೆಯ ಮಾಹಿತಿ ಸಲ್ಲಿಸಲು ಸೂಚನೆ

**ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ):**

ಕೋವಿಡ್–19 ರ ಲಾಕ್‌ಡೌನ್ ಹಿನ್ನೆಲೆಯಲ್ಲಿ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ರೂ. 5000/– ಒಮ್ಮೆ ಪರಿಹಾರ ಧನವನ್ನು ಘೋಷಿಸಿದ್ದು. ಚಾಲಕರು "ಸೇವಾ ಸಿಂಧು" ವೆಬ್ ಪೋರ್ಟ್‌ಲ್ ಮೂಲಕ ಪರಿಹಾರ ಧನ ಕೋರಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ದಿನಾಂಕ 31–07–2020 ರ ಅಂತ್ಯಕ್ಕೆ ಪರಿಹಾರ ಧನ ಕೋರಿ ಒಟ್ಟು 2,45,884 ಅರ್ಜಿಗಳು ಸ್ವೀಕೃತವಾಗಿದ್ದು, ರೂ. 107.05 ಕೋಟಿಗಳ ಅನುದಾನವನ್ನು ಉಪಯೋಗಿಸಿಕೊಂಡು ಇಲ್ಲಿಯವರೆಗೆ ಒಟ್ಟು 2,15,515 ಫಲಾನುಭವಿಗಳ ಖಾತೆಗಳಿಗೆ ಪರಿಹಾರ ಧನವನ್ನು ನೇರವಾಗಿ ಡಿ.ಬಿ.ಟಿ ಮೂಲಕ ಜಮೆ ಮಾಡಲಾಗಿರುತ್ತದೆ. 24,593 ಫಲಾನುಭವಿಗಳ ಅರ್ಜಿಗಳಿಗೆ ಐ.ಡಿ. ವ್ಯಾಲಿಡೇಷನ್ ಅನುತ್ತೀರ್ಣ ತಾಂತ್ರಿಕ ಸಮಸ್ಯೆಯಿಂದ/ಫಲಾನುಭವಿಗಳ ಬ್ಯಾಂಕ್ ಖಾತೆಗಳು **Inactive** ಆಗಿರವ ಕಾರಣ/ಬ್ಯಾಂಕ್ ಖಾತೆಗಳಿಗೆ ಆಧಾರ್ ಸಂಖ್ಯೆ ಲಿಂಕ್ ಆಗದಿರುವ ಕಾರಣ ಪರಿಹಾರ ಧನವನ್ನು ವಿತರಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ 24,593 ಅರ್ಜಿದಾರರಿಗೆ ಪರಿಹಾರ ಧನವನ್ನು ವಿತರಿಸುವ ಸಂಬಂಧ ಹೆಚ್ಚುವರಿ ಬ್ಯಾಂಕ್ ಖಾತೆಯ ಮಾಹಿತಿಗಳನ್ನು ದಾಖಲಿಸುವುದು ಅವಶ್ಯಕವಾಗಿದ್ದು, "ಸೇವಾ ಸಿಂಧು" ವೆಬ್ ಪೋರ್ಟ್‌ನಲ್ಲಿ ಹೆಚ್ಚುವರಿ ಬ್ಯಾಂಕ್ ಖಾತೆಯ ಮಾಹಿತಿಗಳನ್ನು ದಾಖಲಿಸುವ ಮೂಲಕ ಪರಿಹಾರ ಧನ ವಿತರಿಸಲು ಸಹಕರಿಸಬೇಕೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಭಾರತ್ ಸ್ಟೇಜ್–4 ಮಾಪನದ ಹೊಸ ವಾಹನಗಳನ್ನು ನೋಂದಾಯಿಸಲು ಅವಧಿ ವಿಸ್ತರಣೆ

**ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ):**

ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಲಾಕ್ ಡೌನ್ ಅವಧಿಗೆ ಮುಂಚೆ ಮಾರ್ಚ್ 24, 2020ರ ವರೆಗೆ ಮಾರಾಟವಾಗಿ, ಇ-ವಾಹನ್ ಪೋರ್ಟಲ್‌ನಲ್ಲಿ ನಮೂದಿತವಾಗಿ ನೋಂದಣಿಯಾಗದೇ ಉಳಿದಿರುವ ಭಾರತ್ ಸ್ಟೇಜ್-4 ಮಾಪನದ ಹೊಸ ವಾಹನಗಳನ್ನು ನೋದಾಯಿಸಲು ಸೆಪ್ಟೆಂಬರ್ 30ರ ವರೆಗೆ ನೀಡಿರುವ ಕಾಲಾವಕಾಶವನ್ನು ವಿಸ್ತರಿಸಿ ಅಕ್ಟೋಬರ್ 16ರ ವರೆಗೆ ಕಾಲಾವಕಾಶವನ್ನು ನೀಡಿದ್ದು, ವಾಹನ ಮಾಲೀಕರು ನಿಗಧಿತ ಕಾಲಾವಧಿಯೊಳಗೆ ನೋಂದಾಯಿಸಿಕೊಳ್ಳುವಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಟೋರಿಕ್ಷಾಗಳಿಗೆ ನೀಡಲಾಗಿರುವ ರಹದಾರಿಗಳನ್ನು ಇ-ಪರ್ಮಿಟ್ ಆಗಿ ಬದಲಾಯಿಸಿಕೊಳ್ಳಲು ಸೂಚನೆ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ): ಬೃಹತ್ ಬೆಂಗಳೂರು ಮಹಾನಗರ ಪಾಲಿಕರ ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ ಆಟೋರಿಕ್ಷಾ ಕ್ಯಾಬ್ ವಾಹನಗಳಿಗೆ ಈಗಾಗಲೇ ನೀಡಲಾಗಿರುವ ರಹದಾರಿಗಳನ್ನು ಹೈ-ಸೆಕ್ಯೂರಿಟಿ ಕಾಗದದಲ್ಲಿ QR Code ಮತ್ತು ಇತ್ಯಾದಿ ಸುರಕ್ಷತಾ ಕ್ರಮಗಳನ್ನೊಳಗೊಂಡಿರುವ ಸುರಕ್ಷತಾ ಕಾಗದದಲ್ಲಿ (Security Paper ) ಇ ಪರ್ಮಿಟ್‌ನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಆಟೋರಿಕ್ಷಾ ರಹದಾರಿ ಮತ್ತು ರಾಜ್ಯ ಸಾರಿಗೆ ನಿಗಮ (KA57),ಶಾಂತಿನಗರ, ಬೆಂಗಳೂರು ಇಲ್ಲಿ ನೀಡಲು ಈಗಾಗಲೇ ಕ್ರಮಕೈಗೊಳ್ಳಲಾಗಿದೆ.

ಇ-ಪರ್ಮಿಟ್ ಆಟೋರಿಕ್ಷಾ ಚಾಲನಾ ಅನುಜ್ಞಾ ಪತ್ರದ ಆಧಾರದ ಮೇಲೆ ಹೊಂದಿರುವುದರಿಂದ ರಹದಾರಿದಾರರು ತಾವು ಖುದ್ದಾಗಿ ಪ್ರದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಆಟೋರಿಕ್ಷಾರಹದಾರಿ ಮತ್ತು ರಾಜ್ಯ ಸಾರಿಗೆ ನಿಗಮ, ಶಾಂತಿನಗರ, ಬೆಂಗಳೂರು ಇಲ್ಲಿ ಹಾಜರಾಗಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಭಾವಚಿತ್ರವನ್ನು ತೆಗೆಸಿಕೊಳ್ಳತಕ್ಕದ್ದು. ಆಟೋರಿಕ್ಷಾ ಕ್ಯಾಬ್ ಮಾಲೀಕರು-ಚಾಲಕರು ನವೆಂಬರ್ 30 ರೊಳಗಾಗಿ ತಮ್ಮ ವಾಹನಗಳಿಗೆ ನೀಡಲಾಗಿರುವ ರಹದಾರಿಗಳನ್ನು ಇ-ಪರ್ಮಿಟ್ ಆಗಿ ಕಚೇರಿ ವೇಳೆಯಲ್ಲಿ ಬದಲಾಯಿಸಿಕೊಳ್ಳುವಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಭೇಟಿ ನೀಡಲು ಅನುಮತಿ ಇಲ್ಲ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ):

ಕೋವಿಡ್-19 ರ ಹಿನ್ನೆಲೆಯಲ್ಲಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳನ್ನು ಶಾಲೆ/ಪದವಿಪೂರ್ವ ಕಾಲೇಜುಗಳಿಗೆ ಭೇಟಿಗೆ ಅಕ್ಟೋಬರ್ 15 ರ ವರೆಗೆ ಅನುಮತಿ ನೀಡದಿರಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.